ಪ್ರಾರ್ಥನೆ

# ಶ್ರೀರಾಮಕೃಷ್ಣ ಸುಪ್ರಭಾತಮ್ - ೩

**ವಿಶ್ವಾಸಭಕ್ತಿಯುತಸಂಸೃತಿತಾಪಭಾಜಾಮ್**
**ಆಶ್ವಾಸದಾಯಕದಯಾಮೃತವಾರಿರಾಶೇ ।**
**ವಿಶ್ವಾಭಿನಂದ್ಯಗುಣವಿಶ್ರುತದಿವ್ಯನಾಮನ್**
**ಶ್ರೀರಾಮಕೃಷ್ಣಭಗವನ್ ತವ ಸುಪ್ರಭಾತಮ್ ॥ ೭ ॥**

ಸಂಸಾರದ ತಾಪದಲ್ಲಿ ಬೇಯುತ್ತಿರುವ, (ಭಗವಂತನಲ್ಲಿ) ವಿಶ್ವಾಸ, ಭಕ್ತಿಯುಳ್ಳ ಜನರಿಗೆ ಭರವಸೆಯನ್ನು ನೀಡುವ ದಯಾಮೃತದಸಾಗರನೂ, ವಿಶ್ವವೆಲ್ಲವೂ ಮೆಚ್ಚುವ ಗುಣಗಳಿಂದ ಪ್ರಸಿದ್ಧವಾದ ದಿವ್ಯನಾಮವುಳ್ಳವನೂ ಆದ ಶ್ರೀರಾಮಕೃಷ್ಣ ಭಗವಂತನೆ, ನಿನಗೆ ಶುಭೋದಯವಾಗಲಿ.



**ವೀತಾಶಸರ್ವವಿಷಯೇಷು ಸದಾನಿತಾಂತ-**
**ಪೂತಾಂತರಂಗಜನಜಾಡ್ಯವಿನಾಶಕಾರಿನ್ ।**
**ಸ್ಫೀತಾತ್ಮಭೋಧ ವಿವಿಧಾಗಮತತ್ತ್ವವೇದಿನ್**
**ಶ್ರೀರಾಮಕೃಷ್ಣಭಗವನ್ ತವ ಸುಪ್ರಭಾತಮ್ ॥ ೮ ॥**

ಪ್ರಾಪಂಚಿಕವಾದ ಯಾವ ಭೋಗದಲ್ಲೂ ಅಭಿಲಾಷೆಯಿಲ್ಲದಿರುವ, ಅತ್ಯಂತ ಪವಿತ್ರವಾದ ಅಂತರಂಗವುಳ್ಳ, ಜನರ ಜಡತೆಯನ್ನು ದೂರಮಾಡಿದ, ಆತ್ಮಜ್ಞಾನದಿಂದ ಪರಿಪೂರ್ಣನಾದ, ಅನೇಕ ವಿಧವಾದ ಶಾಸ್ತ್ರ ಆಗಮ)ಗಳ ತತ್ತ್ವವನ್ನು ಬಲ್ಲ ಶ್ರೀರಾಮಕೃಷ್ಣ ಭಗವಂತನೆ, ನಿನಗೆ ಶುಭೋದಯವಾಗಲಿ.

**ದಿವ್ಯಪ್ರಭಾವಲಯಿತಾನನಪಾದಭಾಜಾಮ್**
**ಭವ್ಯಪ್ರದಾನಪರಮುಕ್ತಿಪಥಪ್ರದಾಯಿನ್ ।**
**ಸ್ತವ್ಯಪ್ರಕೃಷ್ಟಮಹಿಮಾನ್ವಿತದಿವ್ಯಮೂರ್ತೇ**
**ಶ್ರೀರಾಮಕೃಷ್ಣಭಗವನ್ ತವ ಸುಪ್ರಭಾತಮ್॥ ೯ ॥**

ದಿವ್ಯಪ್ರಭೆಯ ಮಂಡಲದಿಂದ ಕೂಡಿದ ಶೋಭಿಸುತ್ತಿರುವ ಮುಖವುಳ್ಳ, ಪಾದವನ್ನಾಶ್ರಯಿಸಿದವರಿಗೆ ಭವ್ಯವಾದ ಫಲಗಳನ್ನು ಅನುಗ್ರಹಿಸುವ, ಶ್ರೇಷ್ಠವಾದ ಮುಕ್ತಿಮಾರ್ಗವನ್ನು ತೋರಿಸಿಕೊಟ್ಟಿರುವ, ಸ್ತುತಿಸಲು ಯೋಗ್ಯವಾದ ಶ್ರೇಷ್ಠ ಮಹಿಮೆಗಳಿಂದ ಕೂಡಿದ ದಿವ್ಯವಿಗ್ರಹಶರೀರವುಳ್ಳ ಶ್ರೀರಾಮಕೃಷ್ಣ ಭಗವಂತನೆ, ನಿನಗೆ ಶುಭೋದಯವಾಗಲಿ.

– ಸ್ವಾಮಿ ಜ್ಞಾನಾನಂದ ಸರಸ್ವತೀ

ಸೂಕ್ತಿಪ್ರಭ

# ನಿವೇದಿತಾ ಸೂಕ್ತಿಗಳು

❁ ಯಾರಿಗೆ ಪರಮಸತ್ಯದ ಸಾಕ್ಷಾತ್ಕಾರವಾಗಿರುವುದೋ ಅವರು ಮಾತ್ರ ಪ್ರಪಂಚವನ್ನೆಲ್ಲ ಪ್ರೀತಿಸಬಲ್ಲರು, ಮನುಷ್ಯನನ್ನು ಸಂಪೂರ್ಣ ನೆಚ್ಚಬಲ್ಲರು.

❁ ಧಾರ್ಮಿಕ ವಿಷಯದಲ್ಲಿ ನೀವು ಪಶ್ಚಿಮದಿಂದ ಸ್ವೀಕರಿಸಬೇಕಾದುದು ಏನೂ ಇಲ್ಲ, ನೀವೇ ಅವರಿಗೆ ಕೊಡಬೇಕಾದುದು ಬೇಕಾದಷ್ಟಿದೆ ಎಂಬುದು ಆಗಲೆ ವೇದ್ಯವಾಗಿರುವಂತೆ, ಸಾಮಾಜಿಕ ವಿಷಯದಲ್ಲಿಯೂ ಯಾವ ಬದಲಾವಣೆಗಳು ಆವಶ್ಯಕವೊ ಅವನ್ನು ಮಾಡಲು ನೀವೇ ಸಮರ್ಥರಿದ್ದೀರಿ, ಹೊರಗಿನವರಾರೂ ಈ ವಿಷಯದಲ್ಲಿ ಮಧ್ಯೆ ಪ್ರವೇಶಿಸಬೇಕಾಗಿಲ್ಲ ಎಂಬುದನ್ನು ತಿಳಿಯಿರಿ.



❁ ನನ್ನ ಮಟ್ಟಿಗೆ ಹೇಳುವುದಾದರೆ ಭಾರತವೇ ನನ್ನ ಯಾತ್ರೆಯ ಪ್ರಾರಂಭ ಸ್ಥಳ, ಅದೇ ನನ್ನ ಗುರಿ!

❁ 'ಭಾರತ' ಎಂಬ ಶಬ್ದದ ಅರ್ಥ, ಮತ್ತು ಪ್ರಪಂಚದಲ್ಲಿ ಭಾರತದ ಸ್ಥಾನ ಹಾಗೂ ಇದರೊಂದಿಗೆ ಭಾರತಭೂಮಿಯ ಮತ್ತು ಭಾರತ ಪ್ರಜೆಗಳ ಸೇವೆ ಮಾಡುವ ಪ್ರಬಲ ಆಕಾಂಕ್ಷೆ – ಇದೇ ಸ್ತ್ರೀಯರಿಗೆ ಶಿಕ್ಷಣವಸ್ತುವಾಗಬೇಕು. ಇದೇ ಶಿಕ್ಷಣದ ಕೇಂದ್ರವಾಗಬೇಕು.

❁ ಭಾರತ ಅತ್ಯಂತ ಸುಸಂಸ್ಕೃತ ದೇಶ. ಜಗತ್ತಿನ ಸಮಸ್ಯೆಗಳಿಗೆ ಪರಿಹಾರ ದೊರಕುವುದು ಅಲ್ಲೇ.

❁ ಹೇ ತಾಯಿ! ಸ್ವಾರ್ಥವನ್ನು ನಮ್ಮಿಂದ ದೂರಮಾಡು. ಕೀರ್ತಿ, ಸಂಪತ್ತು, ಸುಖ ಇವಾವುವೂ ನಮ್ಮ ಮೇಲೆ ಪ್ರಭುತ್ವ ಮಾಡದಿರಲಿ.

❁ ಭಾರತದ ಕನ್ಯೆಯರೆ, ನೀವೆಲ್ಲರೂ 'ಭಾರತ ವರ್ಷ, ಭಾರತವರ್ಷ, ಭಾರತವರ್ಷ!' 'ತಾಯಿ, ತಾಯಿ' ಎಂದು ಜಪ ಮಾಡಬೇಕು.

❁ ವರ್ತಮಾನ ಭಾರತ ಅದರ ಪ್ರಾಚೀನ ಸಂಸ್ಕೃತಿಯಲ್ಲಿ ಆಳವಾಗಿ ಬೇರುಬಿಟ್ಟಿದೆ, ಮತ್ತು ಮುಂದೆ ಭವ್ಯ ಭವಿಷ್ಯವು ಬೆಳಗುತ್ತಿದೆ.